ಬೆಂಬಲ ಬೆಲೆ

95(113); ಶ್ರೀ ಪಾಟೀಲ್ ಜೆ.ಟಿ.

ಅ) ಜೋಳಕ್ಕೆ ಬೆಂಬಲ ಬೆಲೆ ಈಗ ₹ 1810/– ಕೊಡುತ್ತಿದ್ದು, ರೈತರಿಗೆ ಕೊಡುವಂತಹ ಬೆಲೆ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಮುಂಬೈ ಮತ್ತು ಹೈದರಾಬಾದ್ ಕರ್ನಾಟಕದ ಜನರ ಮುಖ್ಯ ಆಹಾರ ಜೋಳ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಆದುದರಿಂದ ಜೋಳಕ್ಕೆ ಕನಿಷ್ಟ ₹ 2000–2500 ಬೆಂಬಲ ಬೆಲೆಯನ್ನು ಘೋಷಿಸಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) ಮಾಲ್ದಂಡಿ ಜೋಳಕ್ಕೆ ಕೇಂದ್ರ ಸರ್ಕಾರವು 2013–14ನೇ ಸಾಲಿಗೆ ಪ್ರತಿ ಕ್ವಿಂಟಾಲಿಗೆ ₹ 1520/– ರಂತೆ ಕನಿಷ್ಟ ಬೆಂಬಲ ಬೆಲೆಯನ್ನು ನಿಗದಿಪಡಿಸಿರುತ್ತದೆ. ರಾಜ್ಯ ಸರ್ಕಾರವು ಪ್ರೋತ್ಸಾಹ ಧನವಾಗಿ ಪ್ರತಿ ಕ್ವಿಂಟಾಲಿಗೆ ₹ 280/– ನೀಡಿ ಒಟ್ಟು ಪ್ರತಿ ಕ್ವಿಂಟಾಲಿಗೆ ₹ 1800/– ಬೆಲೆ ನಿಗದಿಪಡಿಸಿರುತ್ತದೆ.

ಆ) ಹೌದು

ಇ) ಮೇಲೆ ತಿಳಿಸಿರುವಂತೆ (ಅ) ₹ 280/– ಪ್ರೋತ್ಸಾಹಧನ ನೀಡಿ ₹ 1800/–ಬೆಲೆ ನಿಗದಿಗೊಳಿಸಿದೆ.